# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 54/2024**

| | | | |
|---|---|---|---|
| ಹೆಸರು | : | ಶಿವಾನಂದ ವಡ್ಡರ | ಫ್ರಾಸಾ-1 |
| ತಂದೆಯ ಹೆಸರು | : | ಅಣ್ಣಪ್ಪ | ಚಾಸಾ-2 |
| ವರ್ಷ | : | 35 ವರ್ಷ | |
| ಉದ್ಯೋಗ | : | ಚಾಲಕ | |
| ವಿಳಾಸ | : | ಇಂಗಳೇಶ್ವರ | |

ದಿಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

N V VIJAY Digitally signed by N V VIJAY Date: 2025.11.13 16:21:46 +0530

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ದಿಃ 15.03.2024 ರಂದು ನಾನು ವಿದ್ಯಾಗಿರಿಯ 22 ನೆ ಕ್ರಾಸ್ ನ ಹತ್ತಿರ ಇರುವ ಗಾರ್ಡನ್ ಹತ್ತಿರ ಸಂಜೆ 5 ಗಂಟೆಗೆ ಇದ್ದಾಗ ಪೊಲೀಸರು ನನ್ನನ್ನು ಮತ್ತು ಚಾಸಾ-3/ಮಹೇಶ ಎನ್ನುವವರನ್ನು ಕರೆದು, ಈ ಪ್ರಕರಣದಲ್ಲಿ ಪಂಚಸಾಕ್ಷಿಯಾಗಿ ಸಹಕರಿಸಬೇಕು ಎಂದು ಕೋರಿದ್ದು, ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ. ನಂತರ ವಿದ್ಯಾಗಿರಿಯ 22 ನೇ ಕ್ರಾಸ್ ಬಳಿ ಇರುವ ಚಾಸಾ-1/ಶೋಭಾ ಎನ್ನುವವರ ಮನೆಗೆ ಕರೆದುಕೊಂಡು ಹೋಗಿ, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ. ಸ್ಥಳ ಪಂಚನಾಮೆ ಕಾಲಕ್ಕೆ ಚಾಸಾ-1 ರವರು ಆಕೆ ಗಂಡ ಆಕೆಯ ಮೇಲೆ ದೈಹಿಕ ಕಿರುಕುಳ ಕೊಟ್ಟ ಸ್ಥಳ ಎಂದು ತೋರಿಸಿರುತ್ತಾರೆ. ಸಾಕ್ಷಿ ಸದರಿ ಸ್ಥಳ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ಎರಡು ಭಾವಚಿತ್ರಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿ ಗುರುತಿಸಿದ ಭಾವಚಿತ್ರಗಳನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಎ ಬಿ ಜೆ ವಕೀಲರಿಂದ** ಆರೋಪಿತರ ಪರ

ನಾನು ಕಳೆದ 3 ವರ್ಷಗಳಿಂದ ಬಾಡಿಗೆ ಕಾರನ್ನು ಓಡಿಸಿಕೊಂಡು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 15.03.2024 ರಂದು ವಿಠ್ಠಲ ವಡ್ಡರ ಎನ್ನುವವರನ್ನು ಬಾಡಿಗೆ ಕಾರಿನಲ್ಲಿ ವಿದ್ಯಾಗಿರಿಗೆ ಕರೆದುಕೊಂಡು ಬಂದಿದ್ದೆ. ನಾನು ಚಾಲನೆ ಮಾಡುತ್ತಿದ್ದ ಬಾಡಿಗೆ ಕಾರಿನ ಸಂಖ್ಯೆ ನನಗೆ ನೆನಪಿಲ್ಲ. ವಿದ್ಯಾಗಿರಿಯ 22 ನೇ ಕ್ರಾಸ್ ಬಗ್ಗೆ ನನಗೆ ವಿಠ್ಠಲ ವಡ್ಡರ ರವರು ತಿಳಿಸಿರುತ್ತಾರೆ. ಚಾಸಾ-1

ರವರು ನನಗೆ ಮೊದಲೆ ಪರಿಚಯ ಇರಲಿಲ್ಲ. ಚಾಸಾ-3/ಮಹೇಶ ಎನ್ನುವವರು ನಮ್ಮ ಜೊತೆಯಲ್ಲಿ ವಿಜಯಪುರದಿಂದ ನಮ್ಮ ಬಾಡಿಗೆ ಕಾರಿನಲ್ಲಿ ಬಂದಿದ್ದರು.

2. ಪಂಚನಾಮೆ ಕಾಲಕ್ಕೆ ಪೊಲೀಸರಿಗೆ ನಾನು ನನ್ನ ಹುದ್ದೆ ವ್ಯಾಪಾರ ಎಂದು ಹೇಳಿರುತ್ತೇನೆ. ಚಾಸಾ-1 ರವರು ವಾಸವಾಗಿದ್ದ ಮನೆಯ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಚಾಸಾ-1 ರವರ ಮನೆಯಲ್ಲಿ ಯಾವುದೇ ಗಲಾಟೆ ಆದರೆ ಅಕ್ಕಪಕ್ಕದವರಿಗೆ ಕೇಳಿಸುತ್ತದೆ ಎಂದರೆ ಸರಿ.

3. ಚಾಸಾ-6/ನಿರ್ಮಲಾ, ಚಾಸಾ-7/ಮಲ್ಲಮ್ಮ, ಚಾಸಾ-8/ಮುತ್ತಪ್ಪ ನನ್ನ ಪರಿಚಯಸ್ಥರು ಎಂದರೆ ಸರಿ. ಅವರು ಸಹ ವಿಜಯಪುರದ ವಾಸಿಗಳಾಗಿದ್ದು, ಸಾಮಾಜಿಕ ಕಾರ್ಯಕರ್ತರು ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚನಾಮೆಯ ದಿನ ಚಾಸಾ-6 ರಿಂದ 8 ರವರನ್ನು ನಮ್ಮ ಬಾಡಿಗೆ ಕಾರಿನಲ್ಲಿ ವಿಜಯಪುರದಿಂದ ಕರೆದುಕೊಂಡು ಬಂದಿದ್ದೆ ಎಂದು ನುಡಿಯುತ್ತಾರೆ. ಚಾಸಾ-1 ರವರು ವಾಸವಾಗಿದ್ದ ಮನೆಯ ಸಂಖ್ಯೆನನಗೆ ನೆನಪಿಲ್ಲ. ನನ್ನ ಸಮಕ್ಷಮ ಚಾಸಾ-1 ರವರು ಯಾವುದೇ ಸ್ಥಳ ತೋರಿಸಿರುವುದಿಲ್ಲ ಮತ್ತು ನಿಪಿ-1 ರಂತೆ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಪಂಚನಾಮೆ ಕಾಲಕ್ಕೆ ಆಕೆಯ ಗಂಡ ಆಕೆಗೆ ದೈಹಿಕವಾಗಿ ಕಿರಕುಳ ಕೊಟ್ಟ ಯಾವುದೇ ವಿಚಾರ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

N V VIJAY

Digitally signed by N V VIJAY
Date: 2025.11.13 16:21:54 +0530